ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಸರ್ಕಾರದ ಮುಂದೆ ಇದ್ದ ಲ್ಯಾಂಡ್ ಗ್ರಾಂಟ್ ಕೇಸನ್ನು ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್‌ಗೆ ವರ್ಗ ಮಾಡಿದೆ. ನಾನು ತಿಂಗಳು ತಿಂಗಳಿಗೂ ಅದರ ವರದಿಯನ್ನು ತರಿಸಿ ನೋಡುತ್ತೇನೆ. ಮತ್ತೆ ಟ್ರಿಬ್ಯೂನಲ್ ಹೊರಗಡೆ ಹೋಗಿ ಕುಳಿತು ತೀರ್ಮಾನ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ ಮಾನ್ಯ ಸದಸ್ಯರಾದ ಶ್ರೀಮಾನ್ ಎಸ್. ಎಂ. ಶೀರ್ವಾಳಿ ಚಂದ್ರಶೇಖರ್ ಅವರು ಮಾತನಾಡುತ್ತಾ ಇದು ಕಾರ್ಯಗತವಾಗುದವುರಲ್ಲಿ ಬಹಳ ನಿಧಾನವಾಗಿದೆಯೆಂದು ಹೇಳಿದರು. ಅದು ನಿಜ. ಆದರೆ ಪ್ರಾರಂಭದಲ್ಲಿಯೇ ಕೆಲವಾರು ತೊಡಕುಂಗಳು ಬಂದಿರುವುದೇನೋ ನಿಜವಾದದು. ಆದರೆ ಈಗ ಬೇಗನೆ ಇದರಲ್ಲಿರತಕ್ಕ ತೊಂದರೆಗಳನ್ನು ಪರಿಹಾರ ಮಾಡಿ ಸೂಕ್ತ ಕ್ರಮವನ್ನು ತೆಗದುಕೊಳ್ಳುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇನ್ನು ಮುಂದೆ ಇಂತಹ ತೊಂದರೆಗಳು ಆಗಲಾರದೆಂಬ ನಿರೀಕ್ಷೆ ಇದೆ. ಇಷ್ಟು ವಿಚಾರಗಳನ್ನು ಈ ಸಭೆಗೆ ತಿಳಿಸಿರುವುದರಿಂದ, ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

MADAM SPEAKER:—The question is–

"That the Karnataka Appellate Tribunal Bill, 1976 be taken into consideration."

The motion was adopted

CLAUSES 2—17

MADADM SPEAKER:—The question is–

"That clauses 2–17 both inclusive, do stand part of the Bill"

The Motion was adopted.

Clauses 2 to 17, both inclusive, were added to the Bill.

CLAUSE 1 ETC,

MADAM SPEAKER:—The question is :

"That clause 1, the long Title, the Preamble and the Enacting formula do stand part of the Bill."

The motion was adopted

Clause 1, the long Title and the Preamble and the enacting formulas were added to the Bill.

Motion to Pass

SRI N. HUTCHMASTHY GOWDA:—I beg to move–

"That the Karnataka Appellate Tribunal Bil, 1976 be passed."

MADAM SPEAKER:—The question is :

"That the Karnataka Appellate Tribunal Bill, 1976 be passed"

The motion was adopted and the Bill was passed

THE KARNATAKA RENT CONTROL (AMENDMENT) BILL, 1976

Motion to Consider

SRI N. HUTCHMASTHY GOWDA (Minister for Revenue).—I beg to move -

'That the Karnataka Rent Control (Amendment) Bill, 1976, be taken into consideration.''

MADAM SPEAKER —Motion moved-

"That the Karnataka Rent Control (Amendment) Bill 1976, be taken into consideration"

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಹೌಸ್‌ರೆಂಟ್ ಕಂಟ್ರೋಲ್ ಆಕ್ಟ್ 1961ನೇ ಇಸವಿಯಲ್ಲಿ ಜಾರಿಗೆ ಬಂದು 1975ನೇ ಇಸವಿ ಡಿಸೆಂಬರ್ ಆಖೈರ್‌ವರೆಗೆ ಜಾರಿಯಲ್ಲಿತ್ತು. ಇದಕ್ಕೆ ಬೇಕಾದಂಥ ತಿದ್ದುಪಡಿಗಳನ್ನು ಅನೇಕ ಮಾನ್ಯ ಸದಸ್ಯರು ಈ ಸಭೆಯ ಒಳಗೂ ಹಾಗೂ ಹೊರಗೂ ಅನೇಕ ಸಂದರ್ಭಗಳಲ್ಲಿ ನನ್ನ ಗಮನಕ್ಕೆ ತೆಗೆದುಕೊಂಡು ಬಂದಿದ್ದರು. ಆದರೆ ಈ ತಿದ್ದುಪಡಿಗಳನ್ನೆಲ್ಲಾ ತಂದು ಈ ಸಭೆಯ ಒಪ್ಪಿಗೆ ಪಡೆಯುವುದಕ್ಕೆ ಕಾಲಾವಕಾಶ ಬೇಕಾಯಿತು. ಆದರೆ ಈ ಮಧ್ಯ ಈಗಿರತಕ್ಕ ಕಾನೂನು 1975ನೇ ಇಸವಿ ಡಿಸೆಂಬರ್ 31ನೇ ತಾರೀಖು ಆದರ ವಾಯಿದೆ ಗತಿಸಿ ನಮಗೆ ಯಾವುದೇ ಕಾನೂನು ಜಾರಿಯಲ್ಲಿಡುವ ಪರಿಸ್ಥಿತಿ ಇರಲಿಲ್ಲ. ಆ ಸಂದರ್ಭದಿಂದ 1976ನೇ ಇಸವಿ ಡಿಸೆಂಬರ್ ಆಖೈರುವರೆಗೆ ಅದನ್ನು ಜಾರಿಯಲ್ಲಿಡಬೇಕಾಯಿತ್ತು. ಅಷ್ಟು ಮಾತ್ರ ಬದಲಾವಣೆಯನ್ನು ಈ ಮಸೂದೆಯಲ್ಲಿ ಮಾಡಲಾಗಿದೆ ಮತ್ತೆ ಅದನ್ನೇ ಜಾರಿಯಲ್ಲಿಡುವುದಕ್ಕಾಗಿ ಸೂಕ್ತ ಅವಕಾಶ ವಾಗಬೇಕೆಂದು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿದ್ದೇವೆ. ಅದಕ್ಕಾಗಿ ಈಗ ಈ ಸಭೆಯ ಒಪ್ಪಿಗೆಗೋಸ್ಕರ ಈ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟಿದ್ದೇವೆ. ಇದಕ್ಕೆ ಬೇಕಾದಂಥ ತಿದ್ದುಪಡಿಗಳ ಬಗ್ಗೆ ಈಗಾಗಲೇ ತೀವ್ರಾಲೋಚನೆ ಮಾಡಿ ಏನೇನು ಕಾನೂನುಗಳಿವೆಯೋ ಅವೆಲ್ಲವನ್ನೂ ತೆಗೆದು ಕೊಂಡು ಈ ವರ್ಷದ ಆಖೈರಿನೊಳಗೆ ಈ ಸಭೆಯ ಒಪ್ಪಿಗೆ ಪಡೆದು ಕಾನೂನು ಜಾರಿಗೆಗೆ ಕೊಡಬೇಕೆಂದು ಸರ್ಕಾರದ ಅಭಿಪ್ರಾಯವಿದೆ. ಈಗಿರತಕ್ಕ ಅವಧಿಯನ್ನು ಮುಂದುವರಿಸುವಂಥಾದ್ದು ಮಾತ್ರ ಇಲ್ಲಿ ಬಹುಮುಖ್ಯವಾಗಿರುವುದರಿಂದ ಇದಕ್ಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟಿ) —ಮಾನ್ಯ ಸಭಾಧ್ಯಕ್ಷಣಿಯವರೇ, ಇದೊಂದು ಸಣ್ಣದಾದಂಥ ಬಿಲ್. ಇದರ ಬಗ್ಗೆ ಹೆಚ್ಚಿನ ಚರ್ಚೆ ಅವಶ್ಯಕವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ ಆದರೆ ಈಗ ಮಾನ್ಯ ಮಂತ್ರಿಗಳು ರೆಂಟ್ ಕಂಟ್ರೋಲ್ ಆಕ್ಟ್‌ದಲ್ಲಿ ಕೆಲವು ಮಾರ್ಪಾಟುಗಳು ಆಗಬೇಕು, ಆ ಮಾರ್ಪಾಟುಗಳೆಲ್ಲವೂ ತಿದ್ದುಪಡಿ ರೂಪದಲ್ಲಿ ಆದಷ್ಟು ಜಾಗ್ರತೆಯಾಗಿ ತೆಗೆದುಕೊಂಡು ಬರುತ್ತೇವೆಂದು ಹೇಳಿದರಂ ಇಂತಹ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಈಗ ಅವರ ಗಮನಕ್ಕೆ ತರುವುದು ಮುಖ್ಯವೆಂದು ನಾನು ತಿಳಿದುಕೊಂಡಿದ್ದೇನೆ. ನನಗೆ ತಿಳಿದಿರುವ ಹಾಗೆ ಬಾಡಿಗೆದಾರರಿಗೆ ಸಾಕಾದಷ್ಟು ಕಿರುಕುಳ ವಿದೆಯೆನ್ನುವ ಅಂಶ ಎಲ್ಲಾ ಕಡೆಯೂ ಸ್ಪಷ್ಟವಾಗಿದೆ. ಕೆಲವು ಕಡೆಗಳಲ್ಲಿ ಬಾಡಿಗೆಗೆ ಇರುವಂಥವರಿಗೆ ಅನೇಕ ಕಿರುಕುಳಗಳನ್ನು ಕೊಡುತ್ತಿದ್ದಾರೆ ಅದು ಹೇಗೆಂದರೆ, ಒಂದು ಕಡೆ ನೀರು ನಿಲ್ಲಿಸುವುದು, ಪಕ್ಕದಲ್ಲೊಂದು ಕಡೆ ಲೈಟ್ ನಿಲ್ಲಿಸುವುದು, ಇನ್ನೊಂದು ಕಡೆ ಮನೆಯೊಳಗಿದ್ದ ಸಾಮಾನುಗಳನ್ನು ಹೊರಗೆ ಹಾಕಿ ಗೂಂಡಾಯಿಂದ ಮಾಡಿ ಇದ್ದಕ್ಕಿದ್ದಹಾಗೆ ಅನೇಕ ಸಂದರ್ಭಗಳಲ್ಲಿ ಬಾಡಿಗೆದಾರರಿಗೆ ಮಾಲೀಕರು ಹೆಚ್ಚಿನ ಕಿರುಕುಳಗಳನ್ನು ಕೊಡುತ್ತಿದ್ದಾರೆ. ಬಾಡಿಗೆಗಳನ್ನೂ ಕೂಡ ಅವರು ಸಿಕ್ಕಾಪಟ್ಟೆ ಹೆಚ್ಚು ಮಾಡುತ್ತಾ ಇದ್ದಾರೆ. ನನ್ನ ಮಂಗಳೂರಿನಲ್ಲಿ ೮೦ ರೂಪಾಯಿಗಳನ್ನು ಬಾಡಿಗೆ ಕೊಡುತ್ತಿದ್ದಳು. ಈಗ ೧೫೦ ರೂಪಾಯಿಗಳನ್ನು ಮಾಡಿದ್ದಾರೆ ಆ ರೀತಿ ಕೊಟ್ಟರೆ ಕೊಡಿ, ಇಲ್ಲದಿದ್ದರೆ ಮನೆ ಬಿಟ್ಟು ಹೋಗಿ ಎಂದು ಹೇಳುವವರಾಗಿದ್ದಾರೆ. ಆತಿ ಹೆಚ್ಚಿನ ರೀತಿಯಲ್ಲಿ ಬಾಡಿಗೆ ಕೊಟ್ಟವರ ಕಾಟ ತಡೆಯಲಾರದೆ, ಅವರಲ್ಲಿ ಜಗಳವಾಡುವ ಹವ್ಯಾಸವನ್ನು ಬಿಟ್ಟು, ಅನಿವಾರ್ಯವಾಗಿ ಹೆಚ್ಚಿನ ಬಾಡಿಗೆಯನ್ನು ಕೊಡುವ ಪ್ರಸಂಗ ಬಂದಿದೆ.

ಫೇರ್ ರೆಂಟ್ ನಿಗದಿಪಡಿಸಲಿಕ್ಕೆ ರೆಂಟ್ ಕಂಟ್ರೋಲ್ ಆಫೀಸ್, ಕೋರ್ಟ್-ಕಚೇರಿಗಳನ್ನು ಹತ್ತುವುದಕ್ಕೆ ಸಾಧ್ಯವಾಗುವುದಿಲ್ಲ ಬೇರೆ ವ್ಯವಹಾರ ಇರತಕ್ಕವರು ಆ ರೀತಿ ಹೋಗಬಹುದು. ಮಾಲೀಕರು ಕೊಟ್ಟ ನೆರಳಿನಲ್ಲಿ ಅನೇಕ ವರ್ಷಗಳ ಕಾಲ ಇರುವಾಗ ಇನ್ನು ಬೇರೆ ಕಡೆ ಹೋಗಿ ಇಷ್ಟಿಷ್ಟು ಕಷ್ಟಗಳನ್ನು ಪಡಬೇಕೋ ಏನೆದೇ ಎಂಬುದಾಗಿ ಬೇಜಾರು ಪಟ್ಟುಕೊಂಡು ಅನೇಕರು ಮನೆ ನೊಂದುಕೊಂಡಾದರೂ ಹೆಚ್ಚಿನ ಬಾಡಿಗೆಯನ್ನು ಕೊಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಸಣ್ಣಸಣ್ಣ ಬಾಡಿಗೆ ಮನೆಗಳಲ್ಲಿರುವ ಜನರಿಗೆ ಮಾಲೀಕರು ಹೆಚ್ಚಿನ ಕಿರಕಿಳ ಕೊಡುವುದೂ ಉಂಟು. ಅದನ್ನು ಕೂಡಲೇ ತಪ್ಪಿಸಬೇಕು. ಇದು ಅತಿ ಅಗತ್ಯವಾಗಿದೆಯೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ನಿನ್ನೊಂದು ಕಡೆ ಇನ್ನೊಂದು ಅಂಶವನ್ನೂ ಸಹ ನೋಡಬೇಕಾಗಿದೆ. ರೆಂಟ್ ಕಂಟ್ರೋಲ್ ಆರ್ಡರ್ ಜಾರಿಯಲ್ಲಿ ಇದ್ದರೂ ಸಾಧಾರಣವಾಗಿ ಕೆಲವು ಭಂಡ ಬಾಡಿಗೆದಾರರು ಏನು ಇರುತ್ತಾರೋ ಅವರು ವರ್ಷಾನುಗಟ್ಟಲೆ ಬಾಡಿಗೆಯನ್ನೇ ಕೊಡುವುದಿಲ್ಲ. ಇದರಿಂದ ಮಾಲೀಕರಿಗೂ ಸಹ ಹೆಚ್ಚಿನ ರೀತಿಯಲ್ಲಿ ಬಹಳವಾಗಿ ತೊಂದರೆಯಾಗಿದೆ. ಸಾಮಾನ್ಯವಾಗಿ ಮೂರು ತಿಂಗಳ ಬಾಡಿಗೆ ಕೊಡದಿದ್ದರೆ ಅವರ ಕೇಸನ್ನು ರೆಂಟ್ ಕಂಟ್ರೋಲ್‌ಗೆ ರೆಫರ್ ಮಾಡಿ ಅವರನ್ನು ಮನೆಯಿಂದ ಬಿಡುಗಡೆ ಮಾಡುವ ಅಧಿಕಾರವಿದೆ. ಅವರು ಅಲ್ಲಿಂದ ಪುನ: ಅಪೀಲು ಹಾಕಿ ಹೈಕೋರ್ಟಿಗೆ ಹೋದರೆ ಅಲ್ಲಿ ವರ್ಷಾನುಗಟ್ಟಲೆ ಅದು ಎಳೆದುಕೊಂಡು ಹೋಗುತ್ತದೆ. ಆದ್ದರಿಂದ ಸ್ವಲ್ಪ ನ್ಯಾಯವಾದ ರೀತಿಯಲ್ಲಿ ಮನೆಗಳನ್ನು ಬಾಡಿಗೆಗೆ ಕೊಟ್ಟವರನ್ನೂ ನೋಡಿಕೊಂಡು ಅವರಿಂದ ಯಾವ ರೀತಿಯಲ್ಲಿಯೂ ಬಾಡಿಗೆ ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಅವಕಾಶ ಕೊಡದೆ ನ್ಯಾಯವಾದ ಬಾಡಿಗೆಯನ್ನು ವಸೂಲು ಮಾಡುವ ಹಾಗೆ ತಕ್ಕ ಏರ್ಪಾಡುಗಳನ್ನು ಮಾಡಿಕೊಡಬೇಕು. ಕೆಲವು ಸಂದರ್ಭಗಳಲ್ಲಿ ಮಾಲೀಕರಾಗಿರುವವರು ತಮ್ಮ ಸ್ವಂತಕ್ಕೇ ಮನೆ ಬೇಕೆಂದು ಕೇಳಿದಾಗ ಬಾಡಿಗೆದಾರರು ಬಿಟ್ಟು ಕೊಡುವುದಿಲ್ಲ ಕೆಲವು ಸಂದರ್ಭಗಳಲ್ಲಿ ಅವರಿಗೆ ಏನಾದರೂ ಟ್ರಾನ್ಸ್‌ಫರ್‌ಗಳು ಆಗಿರುತ್ತವೆ. ಆಗ ಮತ್ತೆ ಬಂದಾಗ ಅವರಿಗೆ ಸ್ವಂತಕ್ಕೆ ಬೇಕೆಂದಾಗ ಬಾಡಿಗೆದಾರರು ಅವರ ಮನೆಗಳನ್ನು ಬಿಟ್ಟುಕೊಡುವ ವ್ಯವಸ್ಥೆ ಮಾಡಬೇಕು ಜೆನ್ಯೂನ್ ನೀಡ್‌ಸ್ಸಾಗಿ ಏನಾದರೂ ಮಾಲೀಕರು ಕೇಳಿದ್ದ ಪಕ್ಷದಲ್ಲಿ ಅವರ ಒಂದು ಸ್ವಂತಕ್ಕೆ ಮನೆಯ ಅವಶ್ಯಕತೆ ಇದ್ದ ಪಕ್ಷದಲ್ಲಿ ಕೂಡಲೇ ಅಂತಹವರಿಗೆ ಅದನ್ನು ಬಿಡಿಸಿಕೊಡುವ ಹಾಗೆ ಸೂಕ್ತ ಏರ್ಪಾಡುಗಳನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಇನ್ನು ಮನೆಗಳಿಗೆ ಫೇರ್‌ರೆಂಟ್ ನಿಗದಿ ಮಾಡುವಾಗ ಸರಿಯಾದ ರೀತಿಯಲ್ಲಿ ನ್ಯಾಯವಾಗಿ ಆದನ್ನು ನಿಗದಿಗೊಳಿಸಬೇಕು ಈಗಿನ ರೆಂಟ್ ಕಂಟ್ರೋಲ್ ಆಫೀಸ್‌ಗೆ ಹೋಗಿ ನೋಡಿದರೆ ಯಾರಾದರೂ ಕೂಡ ರೆಂಟ್ ಕಂಟ್ರೋಲ್ ಆಫೀಸ್ ಮುಖಾಂತರ ಮನೆ ಸಿಕ್ಕಿತು ಎಂಬುದಾಗಿ ಹೇಳುವುದೇ ಬಹಳ ಕಡಿಮೆ. ಬೋರ್ಡ್ ಹಾಕುತ್ತಾರಷ್ಟೇ. ದುಡ್ಡು ಯಾರು ಜಾಸ್ತಿಯಾಗಿ ಕೊಡುತ್ತಾರೋ, ಅವರ ಒಂದು ಪ್ರಭಾವವನ್ನು ಅಲ್ಲಿ ತೋರಿಸುತ್ತಾರೋ ಅಂತಹವರಿಗೆ ಮಾತ್ರ ಮನೆ ಸಿಗುತ್ತದೆ. ಇದನ್ನು ನಾನು ಅನೇಕ ಸಂದರ್ಭಗಳಲ್ಲಿ ನೋಡಿದ್ದೇನೆ. ನಿಜವಾಗಿಯೂ ಬಡರಿವಗೆ ರೆಂಟ್ ಕಂಟ್ರೋಲ್ ಆಫೀಸಿನಿಂದ ಅನುಕೂಲವಾಯಿತೆಂಬುದಾಗಿ ಹೇಳುವುದು ಬಹಳ ಕಡಿಮೆ. ಮಾನ್ಯ ಮಂತ್ರಿಗಳು ತಪ್ಪು ತಿಳಿಯದಿದ್ದರೆ ನಮ್ಮ ಕಾಂಗ್ರೆಸ್ ಆಫೀಸ್ ಸೆಕ್ರೆಟರಿಯವರೇ ಒಬ್ಬರು ಅಲ್ಲಿಂದ ಒಂದು ಮನೆಯನ್ನು ಅಲಾಟ್ ಮಾಡಿಸಿಕೊಂಡಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ.—ಯಾರು?

ಶ್ರೀ ಟಿ. ಆರ್. ಶಾಮಣ್ಣ.—ಅವರೂ ಸಹ ನನ್ನ ಸ್ನೇಹಿತರೇ. ಅವರ ಹೆಸರು ಇಲ್ಲಿ ಬೇಡ.

ಅಧ್ಯಕ್ಷರು.—ಆ ವಿಚಾರವನ್ನು ನೀವು ಅವರನ್ನು ಹೊರಗಡೆ ಕೇಳಿ. ಅದನ್ನು ಇಲ್ಲಿ ಏಕೆ ಕೇಳಬೇಕು?

ಶ್ರೀ ಟಿ ಆರ್. ಶಾಮಣ್ಣ.—ಈ ಕಾಂಗ್ರೆಸ್ ಆಫೀಸ್ ಸೆಕ್ರಟರಿಯವರು ನಮಗೆ ಸವಿ ಪದಲ್ಲಿರ ತಕ್ಕಂಥವರೇ ಈ ಬಾಡಿಗೆ ಮನೆಯಮ್ಮ ಅಲಾಟ್ ಮಾಡಬೇಕಾದರೆ ಮೊದಲು ಸ್ಟೇಟ್ ಗೌವರ್ನಮೆಂಟ್ ಎಂಪ್ಲಾಯಿಗೆ ಅಲಾಟ್ ಮಾಡಬೇಕು, ಸೆಂಟ್ರಲ್ ಗೌವರ್ನಮೆಂಟ್ ಎಂಪ್ಲಾಯಿಗೆ ಅಲಾಟ್ ಮಾಡಬೇಕೇ ಅಥವಾ ಇವರ್ ಬೇರೆ ಯಾರಿಗಾದರೂ ಅಲಾಟ್ ಮಾಡಬೇಕೇ ಎನ್ನುವ ಬಗ್ಗೆ ನಿಯಮಗಳು ಇವೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಇವರಿಗೆ ಬಾಡಿಗೆ ಮನೆಯನ್ನು ಅಲಾಟ್ ಮಾಡುವಾಗ ಯಾವ ನಿಯಮವನ್ನೂ ಪಾಲಿಸಿಯನ್ನೂ ಸಹ ಅನುಸರಿಸಿದ ಹಾಗೆ ಕಾಣುತ್ತಿಲ್ಲ. ಅವರಿಗೆ ಒಂದೇ ಒಂದು ಪ್ರಿವಿಲೇಜ್ ಏನೆಂದರೆ ಅವರು ಕಾಂಗ್ರೆಸ್ ಆಫೀಸಿನಲ್ಲಿರುವುದು ವಿಷಯಕ್ಕೆ ಹೇಳುತ್ತಿದ್ದೇನೆಂದರೆ ಅವರು ನಮ್ಮ ಮನೆಯ ಹತ್ತಿರವೇ ವಾಸ ಮಾಡಿಕೊಂಡಿದ್ದಾರೆ ಹಾಗೂ ಅವರು ನನ್ನ ಮಿತ್ರರು. ಈ ರೀತಿ ಎಲ್ಲಿ ಪ್ರಭಾವ ಇರುತ್ತದೆಯೋ, ಎಲ್ಲಿ ದುಡ್ಡು ವರ್ಚು ಮಾಡುತ್ತಾರೆ ಅಲ್ಲಿ ಮೊದಲು ಕೆಲಸ ಆಗುತ್ತದೆ. ಇಂಥದ್ದನ್ನೆಲ್ಲಾ ತಪ್ಪಿಸಬೇಕೆಂದು ಹೇಳುತ್ತೇನೆ. ಬಾಡಿಗೆ ಮನೆಗಳ ಮೇಲೆ ನಿಯಂತ್ರಣವನ್ನಿಟ್ಟುಕೊಂಡು ಯಾರಿಗೆ

ನ್ಯಾಯವಾಗಿ ಸಿಕ್ಕಬೇಕೋ ಅಂಥವರಿಗೆ ಮನೆಗಳನ್ನು ದೊರಕಿಸಿಕೊಡುವ ಹಾಗೆ ಮಾಡಬೇಕು. ಆದರೆ ಆ ರೀತಿ ಮಾಡುತ್ತಿಲ್ಲ. ಎಷ್ಟೋ ಜನ ಬೋರ್ಡ್‌ಗಳನ್ನು ನೋಡಿ ಅರ್ಜಿಗಳನ್ನು ಹಾಕುತ್ತಾರೆ ಆದರೆ ಒಬ್ಬರೂ ಸಹ ನವಂಗೆ ಕಡಿಮೆ ದರದಲ್ಲಿ ಮನೆ ಸಿಕ್ಕಿತು ಎಂದು ಹೇಳತಕ್ಕಂಥವರು ಇಲ್ಲ. ಆದುದರಿಂದ ಇನ್ನು ಸರಿಯಾದ ರೀತಿಯಲ್ಲಿ ಕ್ರಮ ಪಡಿಸಿ ನ್ಯಾಯವಾಗಿ ಮತ್ತು ಹೆಚ್ಚಿನ ಹಣ ಮತ್ತು ಒಂದು ಒತ್ತಾಯಕ್ಕೆ ಒಳಗಾಗದೆ ಎಂಥವರಿಗೆ ಮನೆಯ ಅವಶ್ಯಕತೆ ಜರೂರಾಗಿದೆಯೋ ಅಂಥವರಿಗೆ ಮನೆಗಳನ್ನು ಒದಗಿಸಿಕೊಡುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಜೊತೆಗೆ ನ್ಯಾಯವಾಗಿ ತನ್ನ ಸ್ವಂತಕ್ಕೆ ಮನೆ ಬೇಕು ಎಂದು ಮಾಲೀಕರು ಕೇಳಿದರೆ ಅದನ್ನು ಸಹ ಪರಿಶೀಲನೆ ಮಾಡಿ ಅವರಿಗೆ ದೊರಕಿಸಿಕೊಡುವ ಬಗ್ಗೆ ಸಹ ತಿದ್ದುಪಡಿಗಳನ್ನು ತರಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum) Madam Speaker, I welcome this Bill and want to give some suggestions. When a tenant is living in a house for more than 35 years and the owner residing in a distant city of Bombay or Poona, the tenant has requested the owner to sell that house as he was willing to purchase the some house But the owner has sold that house to same other man, and the third man who has purchased this House has filed a case against the tenant who is residing there. This is a very great harassment to the tenant who is residing in the House. Therefore I request the Government to see that such harassments are not caused to the tenants and tenants who are willing to purchase the house should be given preference while the sale is taking place.

In Municipal areas land lords are taking undue advantage with the Municipal authorities. There are some houses, the owners of which are requesting their friends to file application to the Municipal authorities that those houses are in dilapidated condition and the Municipal authorities without taking into consideration the condition of the Houses are going to demolish the houses in Belgaum. I want to quote one more case. A land lord has filed a suit against the tenant in connection with a shop, The case went upto High Court and the tenant got the decision in favour of him. The owner has informed the same to the Municipal authorities who taking advantage of the emergency domouished the shop because the tenant got a favourable decision from the High Court. I can understand if the Town Planning authorities, want to widen the road, they could have taken such an action. But, there was no such occasion at all. This is nothing but harassment to poor tenants. Therefore, the Government must take in to consideration all these facts and give protection to the tenants. With these words, I thank the Chair and conclude my speech.

† ಶ್ರೀ ಎಂ ಎಸ್. ಕೃಪನ್. — (ವಲ್ಲೀಶ್ವರಂ) ಸನ್ಮಾನ್ಯ ಅಧ್ಯಕ್ಷರೇ. ಮಾನ್ಯ ಶಾಮಣ್ಣನವರು ಹೇಳಿದಂಥ ಮುಖ್ಯವಾದಂಥ ವಿಚಾರಗಳನ್ನೇ ಪುನ: ನಾನು ಉಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಹೇಳಿದ್ದರಲ್ಲಿ ಬಹಳ ಮುಖ್ಯವಾದಂಥ ಕೆಲವಾರು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಬೆಂಗಳೂರಿಂಥ ನಗರದಲ್ಲಿ, ಮತ್ತು ಬೆಂಗಳೂರು ನಗರದಲ್ಲಿ ಯಾರು ಇವತ್ತು ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ ಅವರ ಕಷ್ಟ ಬಹಳ ತೀವ್ರತರವಾಗಿದೆ, ಬಹಳ ತೊಂದರೆಗೆ ಒಳಗಾಗಿ

ದ್ದಾರೆ ಎನ್ನುವುದನ್ನು ಹೇಳಬೇಕಾಗಿದೆ. ನನ್ನ ಅನುಭವಕ್ಕೆ ಬಂದ ಪ್ರಕಾರ ಇವತ್ತು ಬಾಡಿಗೆದಾರರನ್ನು ಸಹ ಜಾಸ್ತಿ ಮಾಡುತ್ತಿದ್ದಾರೆ ಹಾಗೆಯೇ ಹೌಸ್ ಅಡ್ವಾನ್ಸ್‌ನ್ನು ಸಹ ಜಾಸ್ತಿ ಮಾಡುತ್ತಿದ್ದಾರೆ. ಇವತ್ತಿನ ದಿವಸ ೨,೫ ಸಾವಿರ ರೂಪಾಯಿಗಳವರೆಗೆ ಅಡ್ವಾನ್ಸ್ ಕೇಳುತ್ತಿದ್ದಾರೆ. ಹಿಂದೆ ಒಂದು ಕಾಲಕ್ಕೆ ಒಂದು ತಿಂಗಳ ಅಡ್ವಾನ್ಸೊ ಎರಡು ತಿಂಗಳ ಅಡ್ವಾನ್ಸೋ ಕೇಳುತ್ತಿದ್ದರು ಈಗ ಪ್ರಶ್ನೆ ಏನೆಂದರೆ ಸಾವಿರಾರು ರೂಪಾಯಿಗಳು ಅಡ್ವಾನ್ಸು ಕೇಳುವಂಥ ಪದ್ಧತಿ ಏನಿದೆ ಅದನ್ನು ಮೊದಲು ತಾವು ತಪ್ಪಿಸಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಕಾನೂನು ಪ್ರಕಾರ ಇಷ್ಟೇ ಎಂದು ಬಾಡಿಗೆಯನ್ನು ನಿಗದಿ ಮಾಡಬೇಕು ಹಾಗೆ ಒಂದು ವೇಳೆ ಅವರು ಏನಾದರೂ ಜಾಸ್ತಿ ಮಾಡಿದರಲ್ಲಿ ಅವರ ಮೇಲೆ ತೀವ್ರತರವಾದ ಕಾರ್ಯ ಕ್ರಮವನ್ನು ತೆಗೆದುಕೊಂಡರೂ ಪರವಾಗಿಲ್ಲ, ಅದರಿಂದ ಬಾಡಿಗೆದಾರರಿಗೆ ಅನುಕೂಲವಾಗುತ್ತದೆಂದು ಹೇಳಬಹುದಾಗಿದೆ.

ಇನ್ನು ಎರಡನೆಯದು ಏನೆಂದರೆ, ಬಹಳ ಮುಖ್ಯವಾದಂಥಾದ್ದು, ಹೌಸ್ ರೆಂಟ್ ಕಂಟ್ರೋಲ್ ನಿಂದ ಮನೆಗಳನ್ನು ಪಡೆದುಕೊಂಡುಂಥವರು ಬಹಳ ಕಡಿಮೆ ಎಂದು ನಮ್ಮ ಸ್ನೇಹಿತರು ಏನು ಹೇಳಿದರು ಅದು ನಿಜ. ನನ್ನ ಅಭಿಪ್ರಾಯದಲ್ಲೂ ಸಹ ಹೌಸ್ ರೆಂಟ್ ಕಂಟ್ರೋಲ್ ಮನೆಗಳನ್ನು ಪಡೆಯುವುದು ಬಹಳ ಕಷ್ಟದ ಕೆಲಸವಾಗಿದೆ ಆದ್ದಿ ಯಾರು ಮನೆಗಳನ್ನು ಪಡೆಯುವುದಕ್ಕೆ ಸಾಧ್ಯವೆಂದರೆ ದೊಡ್ಡ ದೊಡ್ಡ ಅಧಿಕಾರಿಗೋ, ಇಲ್ಲ ಮಂತ್ರಿಗಳೋ, ಇಲ್ಲ ಎಂ.ಎಲ್.ಎ ಗಳಿಗೋ ಸಾಧ್ಯವಾಗಿರಬಹುದು. ಈ ತರಹ ಯಾರ ಪ್ರಭಾವಶಾಲಿ ವ್ಯಕ್ತಿಗಳಿದ್ದಾರೆ ಅಂಥವರು ಮಾತ್ರ ಈ ಬಾಡಿಗೆ ನಿಯಂತ್ರಣ ಮನೆಗಳನ್ನು ಪಡೆಯಬಹುದಾಗಿದೆ ಇವತ್ತಿನ ದಿವಸ ಸಾಧ್ಯವಾಗಿದೆ. ಸ್ವಂತ ಮನೆ ಇಟ್ಟುಕೊಂಡು ಬಾಡಿಗೆ ಮನೆಯಲ್ಲಿರತಕ್ಕಂಥ ಎಷ್ಟೋ ಮಹಾನುಭಾವರೂ ಇದ್ದಾರೆ. ಅಂಥವರನ್ನು ಮರೆಯುವ ಹಾಗೆಯೇ ಇಲ್ಲ. ಈ ಹೌಸ್‌ರೆಂಟ್ ಕಂಟ್ರೋಲ್‌ನ ಕತೆ ಊರಿಗೆಲ್ಲಾ ಗೊತ್ತಿದೆ. ಎಷ್ಟೊ ಜನ ಸ್ವಂತ ಮನೆಗಳನ್ನು ಬಾಡಿಗೆಗೆ ಕೊಟ್ಟಕೊಂಡು, ತಾವು ಹೌಸ್‌ರೆಂಟ್ ಕಂಟ್ರೋಲ್ ಮನೆಗಳಲ್ಲಿ ವಾಸವಾಗಿದ್ದಾರೆ. ಇವತ್ತಿನ ದಿವಸ ಈ ರೀತಿಯಿಂದಲೂ ಹಣವನ್ನು ಸಂಪಾದಿಸುತ್ತಿದ್ದಾರೆ. ಈ ಎರಡು ಅಂಶಗಳನ್ನು ತಪ್ಪಿಸುವುದಕ್ಕೆ ಏನೂ ಕ್ರಮ ತೆಗೆದು ಕೊಳ್ಳುತ್ತೀರೋ ತೆಗೆದುಕೊಳ್ಳಿ.

ಮೂರನೆಯದಾಗಿ, ಈ ಹೌಸ್ ರೆಂಟ್ ಕಂಟ್ರೋಲ್‌ನ ವ್ಯವಸ್ಥೆ ಮತ್ತು ಅಲ್ಲಿನ ವ್ಯವಹಾರಗಳು ಹೇಗೆ ನಡೆಯುತ್ತದೆ ಎಂದರೆ ಅಲ್ಲಿಯೂ ಸಹ ಬೇಕಾದಷ್ಟು ಲಂಚ ರುಶುವತ್ತುಗಳು ನಡೆಯುತ್ತಿದೆ, ಅದನ್ನು ತಪ್ಪಿಸಲಿಕ್ಕೆ ಆದೂ ಈಗಿನ ಸಮಾಜದಲ್ಲಿ ಸಾಧ್ಯವಿಲ್ಲ. ಆದೂ ಈ ಬಂಡವಾಳಶಾಹಿ ಸಮಾಜದಲ್ಲಿ ಲಂಚರುಶುವತ್ತುಗಳನ್ನು ತಪ್ಪಿಸುವುದಕ್ಕಾಗುವುದಿಲ್ಲ ಹಾಗೂ ಆ ರೀತಿ ತಪ್ಪಿಸುವುದಕ್ಕಾಗುತ್ತದೆಂದು ಹೇಳುವ ಧೈರ್ಯವಿಲ್ಲ, ಇವತ್ತಿನ ದಿವಸ ರೆಂಟ್ ಕಂಟ್ರೋಲ್‌ನಲ್ಲಿ ಇದ್ದಂಥ ಅಧಿಕಾರಿಯನ್ನು ತೆಗೆದು ಕೊಂಡು ಹೋಗಿ ಬೇರೆ ಯಾವುದೋ ಒಂದು ಡಿಪಾರ್ಟ್‌ಮೆಂಟಿನಲ್ಲಿ ಹಾಕಿದ್ದರೂ ಕೂಡ ಅವರು ಅದೇ ವಂನೋಭಾವವನ್ನು ತೋರಿಸುತ್ತಿದ್ದಾರೆ. ಆದುದರಿಂದ ಈ ಮನೋಭಾವ ಮತ್ತು ಅವರು ಆ ರೀತಿ ಕೆಲಸ ಮಾಡುವುದನ್ನು ತಪ್ಪಿಸುವುದು ಅತಿಮುಖ್ಯವಾದಂಥ ಕರ್ತವ್ಯ. ಅದನ್ನು ತಾವು ತೀವ್ರವಾಗಿ ತೆಗೆದುಕೊಳ್ಳಬೇಕು.

ಇನ್ನು ನಾಲ್ಕನೆಯದು, ಹೋಟಲ್‌ಗಳು ಏನಿವೆ, ಅಲ್ಲೂ ಸಹ ಇಷ್ಟೇ ರೂಂ ಬಾಡಿಗೆಯನ್ನು ನಿಗದಿ ಮಾಡಬೇಕೆಂದಿದೆ. ಆದರೆ ದುರಾದೃಷ್ಟವಶಾತ್ ಏನಾಗಿದೆಂದರೆ ದೊಡ್ಡ ದೊಡ್ಡ ಹೋಟಲ್‌ಗಳು, ಬಂದಮೇಲೆ ಈಗ ಬಾಡಿಗೆಯೂ ಜಾಸ್ತಿ ಜಾಸ್ತಿಯಾಗುತ್ತದೆಂದು ನನಗನಿಸುತ್ತದೆ. ಆದುದರಿಂದ ಅದಕ್ಕೂ ಏನಾದರೂ ಒಂದು ನಿಯಂತ್ರಣವಿರಬೇಕೆಂದು ಹೇಳತ್ತೇನೆ. ಒಂದೇ ತರಹದ ರೂಂಗಳಿಗೆ ಕೆಲವರು ೧೦ ರೂಪಾಯಿಯೆಂದು ನಿಗದಿ ಪಡಿಸಿದರೆ, ಇನ್ನೊಬ್ಬರು ೨೦-೩೦ ರೂಪಾಯಿಗಳನ್ನು ನಿಗದಿ ಪಡಿಸುತ್ತಿದ್ದಾರೆ. ಆದುದರಿಂದ ತಾವು ಒಂದು ಬೆಲೆಯನ್ನು ನಿಗಧಿ ಮಾಡುವುದಕ್ಕಿಂತ ಮುಂಚೆ ಹೋಟಲ್ ಮಾಲೀಕರನ್ನು ಕರೆಸಿ, ಮಾತನಾಡಿ ಒಂದು ನಿಯಂತ್ರಣ ಮಾಡಬೇಕೆಂದು ಹೇಳಿ ಮತ್ತೆ ಒಂದು ನಾರಂಸ್ ನಿಗದಿ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

†ಶ್ರೀ ಎಸ್ ಹುಮಾಯೂನ್ (ಶಿವಾಜಿನಗರ).— ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಮಾತನಾಡಬೇಕೆಂದು ಆಸೆ ಇರಲಿಲ್ಲ. ಆದರೆ ಇದರ ಬಗ್ಗೆ ಒಂದು ಮಾತು ಹೇಳುತ್ತೇನೆ, ಸನ್ಮಾನ್ಯ ಕೃಷ್ಣಾರವರು ಮಾತನಾಡುತ್ತಾ ಎಂ.ಎಲ್.ಎ ಗಳಿಗೆ ಮನೆ ಸಿಕ್ಕುತ್ತದೆ ಎಂದೂ ಹೇಳಿದರು ಎಂ.ಎಲ್.ಎ.ಗಳಿಗೆ ಇವೊತ್ತು ಯಾರಿಗೆ ಮನೆ ಸಿಕ್ಕುತ್ತದೆ?

ಶ್ರೀ ಕೋಣಂದೂರು ಲಿಂಗಪ್ಪ —ಹಳೇ ಕಾಂಗ್ರೆಸ್ಸಿನವರಿಗೆ.

ಶ್ರೀ ಎಸ್. ಹಮೀದ್ ಷಾ —ಹಳೇ ಕಾಂಗ್ರೆಸ್ಸಿನವರಿಗೆ ಸಿಕ್ಕಿದರೆ ಪರವಾ ಇಲ್ಲ. ಹೊಸ ಕಾಂಗ್ರೆಸ್ಸಿನವರಿಗೆ ಯಾರಿಗೆ ಸಿಕ್ಕುತ್ತದೆ ? ಈಗ ರೆಂಟ್ ಕಂಟ್ರೋಲ್ ಎಂದು ಹೇಳಿದರೆ We are safeguarding the interest of Officers only and not others ಎಂದು ಹೇಳುತ್ತಾರೆ

ಆದ್ದರಿಂದ ಈ ಮನೆಗಳು ಸಿಕ್ಕುತ್ತಾ ಇರತಕ್ಕುದ್ದು ಆಫೀಸರ್ಸ್‌ಗಳಿಗೆ ಮಾತ್ರ ಆದರಲ್ಲೂ ಈ ಮನೆಗಳು ಕ್ಲಾಸ್ ಒಂದು, ಕ್ಲಾಸ್ ಎರಡನೇ ದರ್ಜೆ ಆಫೀಸರ್ಸ್‌ಗಳಿಗೆ ಮಾತ್ರ ಸಿಕ್ಕುತ್ತಿದೆ ಬೇರೆ ಯಾರು ಆ ಮನೆಗಳನ್ನು ತೆಗೆದುಕೊಳ್ಳುತ್ತಿದ್ದಾರೋ ಆದು ನಮಗೆ ಗೊತ್ತಿಲ್ಲ. ಮಾನ್ಯ ಸಚಿವರು ಮುಂದಿನ ತಿದ್ದುಪಡಿಯಲ್ಲಿ ಆಫೀಸರ್ಸ್‌ಗೆ ಅಲ್ಲದೆ ಎಲ್ಲರಿಗೂ ಮನೆಗಳು ಸಿಕ್ಕಬೇಕು ಎಂದು ತಂದರೆ ಅನುಕೂಲವಾಗುತ್ತದೆ ಎಂದು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎನ್. ಪುಟ್ಟಮಾಸ್ತಿಗೌಡ —ಮಾನ್ಯ ಅಧ್ಯಕ್ಷರೆ, ಈ ಇರತಕ್ಕಂತ ರೀತಿಯಲ್ಲಿ ತಿದ್ದುಪಡಿಗಳನ್ನು ನಾವು ಸಲಹೆ ಮಾಡಲಿಲ್ಲ, ಈಗ ಇರತಕ್ಕ ಕಾನೂನಾನ್ನು ಮುಂದುಪರಿಸಿಕೊಂಡು ಹೋಗಬಾರದು ಎಂದು ಮಾತ್ರ ಒಪ್ಪಿಗೆ ಬೇಕಾಗಿದೆ. ತಿದ್ದುಪಡಿಗಳನ್ನು ತರಬೇಕು ಎನ್ನುವುದು ಸರ್ಕಾರದ ದೃಷ್ಟಿಯಿಂದ ಖಚಿತವಾಗಿದೆ, ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ತಿದ್ದುಪಡಿಯನ್ನು ತರುತ್ತೇವೆ ಎಂದು ಭರವಸೆ ಕೊಡುಬಲ್ಲೆ. ಈಗ ಈ ಕಾನೂನಿನ ಮೂಲ ಉದ್ದೇಶ ಏನು ಇತ್ತು ಅದು ಸಫಲವಾಗಿಲ್ಲ ಎನ್ನುವುದು ಖಚಿತ. ಇದು ಯಾರಿಗೆ ತೊಂದರೆ ಇದೆ. ಅವನು ಅಧಿಕಾರಿಯಾಗಲಿ, ಅಧಿಕಾರೇತರರೇ ಆಗಲಿ ಅವರಿಗೆ ಈ ತೊಂದರೆಯನ್ನು ನಿವಾರಣೆ ಮಾಡಬೇಕು, ಇವೊತ್ತಿನ ದಿವಸ ಮನೆ ಮಾಲೀಕರು ಅವರ ಮನಸ್ಸಿಗೆ ಬಂದಂತೆ ಬಾಡಿಗೆ ಹೆಚ್ಚಿಸಿಕೊಂಡು ಹೋಗಬಾರದು ಎಂದು ಉದ್ದೇಶ ಇದ್ದರೂ ಆದು ಸಫಲವಾಗಿಲ್ಲ ಎನ್ನುವುದು ಮಾನ್ಯ ಸದಸ್ಯರ ಟೀಕೆಯಿಂದ ಗೊತ್ತಾಗುತ್ತದೆ ಮತ್ತೆ ನನ್ನ ಅನುಭವ ಕೂಡ ಆ ರೀತಿಯಾಗಿದೆ.ಇದರಲ್ಲಿ ಸ್ವಂತ ಮನೆಗಳನ್ನು ಇಟ್ಟುಕೊಂಡು ಆದನ್ನು ಹೆಚ್ಚು ಬಾಡಿಗೆಗೆ ಕೊಟ್ಟು ಕಡಿಮೆ ಬಾಡಿಗೆಗೆ ದೊರೆಯತಕ್ಕ ಹೌಸ್‌ರೆಂಟ್ ಕಂಟ್ರೋಲ್ ಮೂಲಕ ಸಿಕ್ಕತಕ್ಕ ಮನೆಗಳಲ್ಲಿ ವಾಸಮಾಡುವುದು ಬೇಕಾದಷ್ಟು ಇವೆ. ಅಲ್ಲದೇ ಹೊಸದಾಗಿ ಮನೆ ಕಟ್ಟಿದರೆ ೫ ವರ್ಷಗಳ ಕಾಲ ಹೌಸ್ ಕಂಟ್ರೋಲ್ ಗವರ್ನಮೆಂಟ್‌ಗೆ ತೆಗೆದುಕೊಳ್ಳುವುದಿಲ್ಲ ಎಂದು ಇದೆ ಈಗ ಹೊರಗಡೆಯಿಂದ ಬಂದಂಥ ಸರ್ಕಾರಿ ನೌಕರರಿಗೆ ಮನೆ ಸಿಕ್ಕುವುದಿಲ್ಲ, ಆದನ್ನು ಅವರಿಗೆ ದೊರಕಿಸಿ ಕೊಡಬೇಕು ಎನ್ನುವ ಉದ್ದೇಶದಿಂದ ಹಿಂದೆ ತಂದಂಥ ಆಕ್ಟ್‌ನಲ್ಲಿ ಉದ್ದೇಶ ಇತ್ತು ಎಂದು ಕಾಣುತ್ತದೆ. ವಾಸದ ಮನೆಗಳು ಇಲ್ಲದೇ ಬೇರೆ ವ ನೆಗಳಿಗೂ ಅನ್ವಯಿಸುವ ರೀತಿಯಲ್ಲಿ ಇನ್ನು ಅನೇಕ ವಿಧವಾದಂತ ಟೀಕೆಗಳಿಗೆ ಸಾಕಷ್ಟು ಅವಕಾಶ ಕೊಡದೆ ಈಗ ಇರತಕ್ಕ ಕಾನೂನಿಗೆ ಒಂದು ವರ್ಷ ಕಾಲ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ. ಆಲ್ಲದೇ ಈಗ ಮಾನ್ಯ ಸದಸ್ಯರು ಹೇಳಿರತಕ್ಕ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದು ಮತ್ತೊಮ್ಮೆ ಈ ಸಭೆಯಲ್ಲಿ ತಿಳಿಸಲಿಕ್ಕೆ ಇಚ್ಚಿಸುತ್ತೇನೆ.

ಈಗ ಮಾನ್ಯ ಕೃಷ್ಣನ್‌ರವರು ಹೋಟಲ್ ಮಾಲೀಕರನ್ನು ಕರೆಸಿ ಅವರ ಅಭಿಪ್ರಾಯವನ್ನು ಪಡೆಯಬೇಕು ಎಂದೂ ಹೇಳಿದ್ದಾರೆ. ಅಲ್ಲದೇ ಒಬ್ಬ ಬಾಡಿಗೆದಾರನಿದ್ದು ಹೋದನಂತರ ಇನ್ನೊಬ್ಬ ಬಾಡಿಗೆದಾರನು ಬರುವುದರೊಳಗೆ ಮತ್ತೆ ಬಾಡಿಗೆ ಜಾಸ್ತಿಯಾಗಿರುತ್ತದೆ ಎಂದು ಹೇಳಿದರು ಈಗ ಯಾವ ಯಾವ ಸಂಸ್ಥೆಯಿಂದ ಈ ಅನಾಹುತವಾಗುತ್ತದೆ ಅವರನ್ನು ಕರೆಸಿ ಅವರ ಅಭಿಪ್ರಾಯ ತೆಗೆದುಕೊಂಡು ನಿರ್ದಿಷ್ಟವಾದ ಕಾನೂನನ್ನು ಬಹಳ ಭದ್ರವಾಗಿ ಹಿಡಿತದಲ್ಲಿ ಇಟ್ಟುಕೊಳ್ಳುವಂತೆ ಮಾಡಬೇಕಾದ್ದು ಅವಶ್ಯಕವಾಗಿದೆ. ಆಷ್ಟೇ ಅಲ್ಲದೇ ಸಾಧ್ಯವಾದಮಟ್ಟಿಗೆ ಯಾವ ಪ್ರಭಾವಕ್ಕೆ ಒಳಗಾಗದೇ ಇರುವ ರೀತಿಯಲ್ಲಿ ಈ ಕಾನೂನು ನಡೆದುಕೊಂಡು ಹೋಗುವ ರೀತಿಯಲ್ಲಿ ರಚನೆ ಮಾಡಬೇಕೆಂದು ನನ್ನ ಆಸೆ ಈಗ ದುಡ್ಡಿನ ಪ್ರಭಾವಕ್ಕೆ ಒಳಗಾಗಬಹುದು ಅಥವಾ ಸ್ಥಾನದ ಪ್ರಭಾವಕ್ಕೆ ಒಳಗಾಗಬಹುದು ಯಾರೂ ಯಾವ ಪ್ರಭಾವಕ್ಕೂ ಒಳಗಾಗದ ರೀತಿಯಲ್ಲಿ ಈ ಕಾನೂನನ್ನು ದೋಷ ವಿಲ್ಲದ ರೀತಿಯಲ್ಲಿ ತಿದ್ದುಪಡಿ ತರುವುದು ಅವಶ್ಯಕವಾಗಿದೆ, ಆದನ್ನು ತಿದ್ದುಪಡಿ ಮಾಡಿ ಸಭೆಯಂ ಮುಂದೆ ತರುತ್ತೇನೆ. ಆಗ ಅವರವರ ಅಭಿಪ್ರಾಯ ಸೂಚಿಸುವುದಕ್ಕೆ ಸಾಕಷ್ಟು ಅವಕಾಶ ಇರುತ್ತದೆ ಅಂತಹ ಸಂದರ್ಭದಲ್ಲೂ ಕೂಡ ಇದು ಒಂದು ಉತ್ತಮವಾದ ಕಾನೂನು ಆಗುವುದಕ್ಕೆ ಸಹಾಯ ಮಾಡಬೇಕೆಂದು ಹೇಳಿ, ಇದಕ್ಕೆ ಒಪ್ಪಿಗೆ ಕೊಡಬೇಕೆಂದೂ ಹೇಳುತ್ತೇನೆ.

MADAM SPEAKER —The question is :

"That the Karnataka Rent Controle (Amendment) Bill, 1976 be taken into consideration."

The motion was adopted

Clauses 2 and 3

MADAM SPEAKER.—The question is :

"That Clauses 2 and 3 do stand part of the Bill."

The motion was adopted.

Clauses 2 and 3, were added to the Bill.

Clause 1 etc.,

MADAM SPEAKER.—The question is :

"That Clause 1, the long title the preamble and the enacting formula do stand part of the Bill"

The motion was adopted

Clause 1, the long Title and the preamble and the enacting formule were added to the Bill.

Motion to pass

SRI N. HUTCHAMASTHY GOWDA (Minister for Revenue) —Madam Speaker, I beg to move :

"That the Karnataka Rent Control (Amendment) Bill 1976 be passed."

MADAM SPEAKER.—The question is :

That the Karnataka Rent Control (Amendment) Bill, 1976 be passed.

The motion was adopted and the bill was passed

THE KARNATAKA LAND REVENUE (AMENDMENT) BILL, 1976 PASSED AS BY THE L.C.

Motion to Consider

SRI N. HUTCHAMASTHY GOWDA (Minister for Revenue).—Madam Speaker, I beg to move :

'That the Karnataka Land Revenue (Amendment) Bill, 1976 as passed by the Legislative Council be taken into consideration.'